ಶ್ರೀ ಕೆ. ಹೆಚ್. ಪಾಟೀಲ್ —ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂಥ ಮಾತು ಬಹಳ ಯೋಗ್ಯವಾಗಿದೆ. ಆ ಮಾತನ್ನು ಅವರು ಮೊದಲೇ ಹೇಳಿದ್ದರೆ ಇಷ್ಟು ಚರ್ಚೆಯಾಗುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

IX. ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರ ವಿತರಣೆಯಲ್ಲಿ ಆದ ಅನ್ಯಾಯದ ಬಗ್ಗೆ

ಸಭಾಧ್ಯಕ್ಷರು.—ಶ್ರೀ ಇದಿನಬ್ಬನವರೇ ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಬಿ.ಎಂ. ಇದಿನಬ್ಬ.—ಸನ್ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರ ವಿತರಣೆಯಲ್ಲಿ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸುವ ಬಗ್ಗೆ ನಾನು ತಮ್ಮ ಮುಖೇನ ಮಾನ್ಯ ಆಹಾರ ಮಂತ್ರಿಗಳ ಗಮನವನ್ನು ಸೆಳೆಯಲು ಬಯಸುತ್ತೇನೆ. ಮತ್ತು ಅವರಿಂದ ಈ ಬಗ್ಗೆ ಉತ್ತರವನ್ನು ಸಹ ಕೇಳಬಯಸುತ್ತೇನೆ.

ಶ್ರೀ ಜಿ ಬಸವಣ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಗೆ ಸುಮಾರು ೨೫೦೦ ಟನ್ ಅಕ್ಕಿಯನ್ನು ಈಗ ಕೊಡುತ್ತಿದ್ದೇವೆ. ಪಡಿತರ ಪದ್ಧತಿಯು ವಿರಿಯಾದಲ್ಲಿ ಮಂಗಳೂರು ಮತ್ತು ಉಡುಪಿ ಬರುತ್ತವೆ. ಪಡಿತರ ಪದ್ಧತಿಯ ಪ್ರಕಾರ ಮೂರು ಯೂನಿಟ್‌ಗಳಿಗೆ ೨೫ ಕೆ.ಜಿ. ಅಕ್ಕಿಯನ್ನು ಕೊಡುತ್ತಿದ್ದೇವೆ. ಪುರಸಭೆಯ ವ್ಯಾಪ್ತಿಯಲ್ಲಿ ಬರುವಂತಹ ಕಾರ್ಡ್‌ದಾರರಿಗೆ ೧೨ ಕೆ. ಜಿ. ಯಿಂದ ೧೫ ಕೆ. ಜಿ. ಯವರೆವಿಗೂ ಅಕ್ಕಿಯನ್ನು ಕೊಡುತ್ತಿದ್ದೇವೆ. ಅದೇ ಗ್ರಾಮಾಂತರ ಪ್ರದೇಶದ ಕಾರ್ಡ್‌ದಾರರಿಗೆ ಕಾರ್ಡ್ ಒಂದಕ್ಕೆ ೫ ಕೆ.ಜಿ. ಅಕ್ಕಿಯನ್ನು ಕೊಡುತ್ತಿದ್ದೇವೆ.

X. ಭೂ ನ್ಯಾಯಮಂಡಲಿ ಹಾಗೂ ಜಿಲ್ಲಾ ಅಭಿವೃದ್ಧಿ/ಸಮಿತಿಗಳ ಸಭೆಯನ್ನು ವಿಧಾನ ಸಭೆಯು ನಡೆಯುವ ಕಾಲದಲ್ಲಿ ನಡೆಸುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ ಭೂ ನ್ಯಾಯ ಮಂಡಲ ಹಾಗೂ ಜಿಲ್ಲಾ ಅಭಿವೃದ್ಧಿ ಸಮಿತಿಗಳ ಸಭೆಯನ್ನು ವಿಧಾನ ಮಂಡಲ ಅಧಿವೇಶನದ ಕಾಲದಲ್ಲಿ ನಡೆಯುವಂತೆ ಏರ್ಪಾಡು ಮಾಡಬೇಕೆಂದು ನಾನು ಮಾನ್ಯ ಕಂದಾಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಂಡು ಈ ಬಗ್ಗೆ ಅವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಸ್. ಆರ್. ಜೊಮ್ಮಾಯಿ —ಸನ್ಮಾನ್ಯ ಅಧ್ಯಕ್ಷರೇ ಭೂ ನ್ಯಾಯ ಮಂಡಲಗಳ ಮುಂದೆ ಬಹಳ ಹೆಚ್ಚು ಕೆಲಸವಿದೆ. ಶಾಸಕರ ಅನುಕೂಲಕ್ಕೆ ಸರಿಯಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಕಾನೂನು ಪ್ರಕಾರ ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಶಾಸಕರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಭೂ ನ್ಯಾಯ ಮಂಡಲಿಗಳ ಸಭೆ ನಡೆಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

XI. ಮೈಸೂರು ಮಧುವನದಲ್ಲಿ ಡಿಸ್ಪಿಲರಿಗೆ ಪರವಾನಿಗಿಯನ್ನು ಕೊಟ್ಟಿರುವುದು.

ಶ್ರೀ ವೇದಾಂತ ಹಮ್ಮಿಗೆ.—ಸನ್ಮಾನ್ಯ ಅಧ್ಯಕ್ಷರೇ ಮೈಸೂರು ನಗರದಲ್ಲಿ ನಾಗರೀಕರು ವಾಸ ಮಾಡುತ್ತಿರುವ ಮಧುವನದಲ್ಲಿ ಡಿಸ್ಪಲರಿಗೆ ಪರ್ಮಿಷನ್ ಕೊಡುತ್ತಿರುವ ಬಗ್ಗೆ ನಾಗರೀಕರಿಂದ ನನಗೆ ಗೊತ್ತಾಯಿತು ಈ ಬಗ್ಗೆ ನಾನು ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ರಮೇಶ್ ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ ಅಂತಹ ವಿಷಯು ಯಾವುದೂ ಸರ್ಕಾರದ ಮುಂದೆ ಇಲ್ಲವೆಂದು ಮಾನ್ಯ ಸದಸ್ಯರಿಗೆ ತಿಳಿಸಲು ಇಷ್ಟಪಡುತ್ತೇನೆ.

XII. ಕೋಡಿಬೆಂಗ್ರೆಯಲ್ಲಿ ಹಿರಿಯ ಪ್ರಾಥಮಿಕ ಪಾಠಶಾಲೆಯ ಅಧ್ಯಾಪಕರಿಂದ ಅವ್ಯವಹಾರಗಳು.

ಶ್ರೀ ಬಸವರಾಜ್.—ಸನ್ಮಾನ್ಯ ಅಧ್ಯಕ್ಷರೇ ಬ್ರಹ್ಮಾವರ ಮತದಾರ ಕ್ಷೇತ್ರದ ಕೋಡಿಬಂಗ್ರೆಯಲ್ಲಿರುವ ಹಿರಿಯ ಪ್ರಾಥಮಿಕ ಪಾಠಶಾಲೆಯ ಅಧ್ಯಾಪಕರ ಅವ್ಯವಹಾರದ ಬಗ್ಗೆ ನಾನು ಮಾನ್ಯ ಶಿಕ್ಷಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ. ಮತ್ತು ಈ ಬಗ್ಗೆ ಸೂಕ್ತ ಉತ್ತರವನ್ನು ಸಹ ಕೇಳಬಯಸುತ್ತೇನೆ.